JETIR.ORG ISSN: 2349-5162 | ESTD Year : 2014 | Monthly Issue
JOURNAL OF EMERGING TECHNOLOGIES AND INNOVATIVE RESEARCH (JETIR)
An International Scholarly Open Access, Peer-reviewed, Refereed Journal

# SWATANTRYA HORATADALLI KANNADA PATRIKEGALU ONDU ADHYANA.

# ಸ್ವಾತಂತ್ರ್ಯ ಹೋರಾಟದಲ್ಲಿ ಕನ್ನಡ ಪತ್ರಿಕೆಗಳು ಒಂದು ಅಧ್ಯಯನ

**Dr. Basayya Irayya Mathapati.**
Assistant Professor in History,
SMYK Govt. First Grade College,
Telsang – 591265, Tq: Athani, Dist : Belagavi.

**Abstract :**

As In many other parts of India, Christian missionaries were the pioneers of Kannada journalism. The first Kannada newspaper, Mangaloora Samachara, a fortnightly, was published in Mangalore in 1843. Rev Herman Moegling of the Basel Mission was its editor. After first freedom struggle the Kannada press had developed rapidly. It may be noted that before Independence period to re-organization of the states, Kannada journalism was spread over two princely states (Mysore and Hyderabad) and two provinces of British India (Bombay and Madras). The publishing centres were Mysore and Bangalore in Mysore State, Belgaum, Dharwad and Hubli in Bombay, Manglore in Madras presidency and Gulburga in Hydrabad state. In the 20th century the leadership of Gandhiji and Balagangadhar Tilaka were influenced leaders likeGangadhar rao Deshapande, Venkatakrishnaiah Vamanrao Jathar,D V Gundappa, P Ramayya and deputy Channabasappa, and so on it made them to participate in the freedom struggle. They tried to bring nationality among the people through their article and papers. Subuddhi prakashana, Rajahamsa, Samyuktha Karnataka, Vrithanta chintamani, Vrithanta Bhodini, Kesari, Karmaveera etc. are the some nudes papers of the period played significant role in awakening the people toward the freedom struggle. Hence I tried to analyses about the contributions of Kannada newspapers to the freedom struggle in brief as per available primary and secondary records.

**Key words:**

Freedom struggle, News papers, Rajahamsa, Vrithanta Chintamani, Samyukta Karnataka, Karmaveera,

ಹೋರಾಟ, ಪತ್ರಿಕೆಗಳು, ರಾಜಹಂಸ, ವೃತ್ತಾಂತ ಚಿಂತಾಮಣಿ, ಸಂಯುಕ್ತ ಕರ್ನಾಟಕ, ಕರ್ಮವೀರ.

ವಿಶ್ವದ ಎಲ್ಲಡೆಗಐಂತೆ ಭಾರತದಲ್ಲಿಯೂ ಪತ್ರಿಕೋದ್ಯಮಕ್ಕೆ ಪ್ರೇರಣೆ ಒದಗಿ ಬಂದಿದ್ದು ತಂತ್ರಜ್ಞಾನ, ರಾಜಕೀಯ, ಸಾಮಾಜಿಕ ಮತ್ತು ಆರ್ಥಿಕ ಬೆಳವಣಿಗೆಗಳಿಂದ ಯೂರೋಪಿನಲ್ಲಿ ಮುದ್ರಣ ಕಲೆ ಮೊದಲು ಅವಿಷ್ಕಾರಗೊಂಡದ್ದು 1456 ರಲ್ಲಿ, ಇದಾದ ನೂರು ವರ್ಷಗಳ ನಂತರ ಭಾರತದಲ್ಲಿ ಮುದ್ರಣ ಯಂತ್ರವನ್ನು ಸ್ಥಾಪಿಸಲಾಯಿತು. ಗೋವಾದಲ್ಲಿದ್ದ ಪೋರ್ಚುಗೀಜ್ ಪಾದ್ರಿಗಳು ಕ್ರೈಸ್ತ ಧರ್ಮ ಪ್ರಚಾರಕ್ಕಾಗಿ ಮೊದಲ ಮುದ್ರಣವನ್ನು ಸ್ಥಾಪಿಸಿದರು. 1557 ರಲ್ಲಿ ಸಂತ ಝೋವಿಯವರ 'ಡೌಟ್ಸಕ್ರಿಸ್ತ' ಗ್ರಂಥವನ್ನು ಪ್ರಕಟಿಸಿದರು. ಇದು ಭಾರತದ ಪ್ರಥಮ ಮುದ್ರಿತ ಗ್ರಂಥ ಹೀಗೆ, ಮುದ್ರಣ ಯಂತ್ರ ಮತ್ತು ಸಾಮಾಜಿಕ, ರಾಜಕೀಯ ಬೆಳವಣೆಗೆ, ಪ್ರೇರಣೆಯಿಂದ ಭಾರತದಲ್ಲಿ ವೃತ್ತ ಪತ್ರಿಕೆಗಳ ಯುಗಾರಂಭವಾಯಿತು.

## ಹಿನ್ನಲೆ:

ಯುರೋಪಿನಲ್ಲಿ ಮುದ್ರಣ ತಂತ್ರಜ್ಞಾನ ಅಭಿವೃದ್ಧಿಗೋಂಡಂತೆ ಭಾತರದಲ್ಲಿ ಪ್ರಕಟಣೋಧ್ಯಮ ಶುರುವಾದದ್ದು ಕ್ರೈಸ್ತ ಧರ್ಮ ಮತ್ತು ಈಸ್ಟ್ ಇಂಡಿಯಾ ಕಂಪನಿಯ ಹಿತಾಸಕ್ತಿಗಳನ್ನು ಪಾಪಾಡುವ ಸಲುವಾಗಿಯೇ, ಬ್ರಟೀಷರ ಹಿತಾಸಕ್ತಿ ರಕ್ಷಣಗಾಗಿಯೇ ಭಾರತದಲ್ಲಿ ಹುಟ್ಟಿಕೊಂಡ ಪತ್ರಿಕೋದ್ಯಮ ಹೆಚ್ಚು ಕಾಲ ಬ್ರಿಟೀಷರ ಸೇವಾನುವರ್ತಿಯಾಗಿ ಉಳಿಯಲಿಲ್ಲ. ಪತ್ರಿಕೆಗಳು ಬಲು ಬೇಗ ಈಸ್ಟ್ ಇಂಡಿಯಾ ಕಂಪನಿ ಮತ್ತು ಬ್ರಿಟೀಷ್ ಆಡಳಿತವನ್ನು ಟೀಕಿಸಲಾರಂಭಿಸಿದವು. ಭಾರತದಲ್ಲಿ ಪತ್ರಿಕೋಧ್ಯಮ ಯುಗಕ್ಕೆ ನಾಂದಿ ಹಾಡಿದ ಪತ್ರಿಕೆ 'ಬೆಂಗಾಲ್ ಗೆಜೆಟ್' ಈ ಪತ್ರಿಕೆ ಆರಂಭವಾದದ್ದು 1780 ರಲ್ಲಿ. ಇದರ ಸಂಪಾದಕ ಆಂಗ್ಲ ಪ್ರಜೆ ಜೇಮ್ಸ್ ಅಗಸ್ಟಿನ್ ಹಿಕಿ, ಬೆಂಗಾಲ್ ಗೆಜೆಟ್, ಹಿಕಿ ಗೆಜೆಟ್ ಎಂದೇ ಆಗ ಪ್ರಖ್ಯಾತವಾಗಿತ್ತು. ಜೇಮ್ಸ್ ಅಗಸ್ಟಿನ್ ಹಿಕಿ, ಬೆಂಗಾಲ್ ಗೆಜೆಟ್, ಪ್ರಾರಂಭಿಸಿದಾಗ, ಭಾರತಲ್ಲಿದ್ದ ಬ್ರಿಟೀಷ ಆಳ್ವಿಕೆಯಲ್ಲಿ

ಭ್ರಷ್ಟಾಚಾರ ತಾಂಡವವಾಡುತ್ತಿತ್ತು. ಆಡಳಿತದಲ್ಲಿನ ಭ್ರಷ್ಟಾಚಾರ ಹಿಕಿಯ ಪತ್ರಿಕೆಯ ಮೊದಲ ಗುರಿಯಾಯಿತು. ಹಿಕಿ, ಬೆಂಗಾಲ್ ಗೆಜೆಟ್ ಪತ್ರಿಕೆಯನ್ನು ರಾಜಕೀಯ ಮತ್ತು ವಾಣಿಜ್ಯ ಸುದ್ದಿಗಳ ಸಾಪ್ತಾಹಿಕ ಎಂದು ಬಣ್ಣಿಸಿದ್ದ.[1]

ಇದೇ ದಶಕದಲ್ಲಿ ಮದ್ರಾಸಿನಿಂದ 'ದಿ ಕೋರಿಯರ್, ಮುಂಬಯಿಯಿಂದ 'ಬಾಂಬೆ ಹೆರಾಲ್ಡ್ ಪತ್ರಿಕೆಗಳು ಪ್ರಾರಂಭವಾದವು. 19ನೇ ಶತಮಾನದಲ್ಲಿ ಜೇಮ್ಸ್ ಸಿಲ್ಕ್ ಬಕಿಂಗ್ ಹ್ಯಾಮ್ ಆಗಮನದೊಂದಿಗೆ ಹೊಸ ಪತ್ರಿಕೆಗಳ ಮನ್ವಂತರಕ್ಕೆ ನಾದಿಯಾಯಿತು. ಜವಹರಲಾಲ್ ನೆಹರುರವರು ಜೇಮ್ಸ್ ಸಿಲ್ಕ್ ಬಕಿಂಗ್ ಹ್ಯಾಮ್ ಪತ್ರಿಕಾ ಸ್ವಾತಂತ್ರ್ಯದ ಹರಿಕಾರ' ಎಂದು ವರ್ಣಿಸಿದ್ದಾರೆ. ಜೇಮ್ಸ್ ಸಿಲ್ಕ್ ಬಕಿಂಗ್ ಹ್ಯಾಮ್ ರ ಕಲ್ಕತ್ತಾ ಕ್ರಾನಿಕಲ್, ರಾಜಾರಾಮ್ ಮೋಹನರಾಯ್ ಸಂವಾದ ಕೌಮುದಿ 1821, ಮಿರತ್ ಉಲ-ಅಕ್ಬರ್ ಎಂಬ ಪತ್ರಿಕೆಗಳನ್ನು ಹೊರತಂದರು, ಇವರನ್ನು ಜವಾಹರಲಾಲ ನೆಹರುರರವರು ಭಾರತೀಯ ಪತ್ರಿಕೋದ್ಯಮ 'ಪಿತಾಮಹ' ಎಂದು ಬಣ್ಣಿಸಿದ್ದಾರೆ.[2] ನಂತರದ ದಿನಗಳಲ್ಲಿ ದಿ ಬಾಂಬೆ ಸಮಾಚಾರ ಎಂಬ ಗುಜರಾತಿ ಪತ್ರಿಕೆ 1822, ಮುಂಬಯಿ ವರ್ತಮಾನ 1830, ಜಮ್-ಎ-ಜಮ್ಶತ್ 1831, ಬಾಂಬೆ ದರ್ಪಣ 1850, ಮೊದಲಾದ ಪ್ರಾದೇಶಿಕ ಪತ್ರಿಕೆಗಳು ಉದಯಗೊಂಡವು. ಸ್ವಾತಂತ್ರ್ಯ ಸಂಗಾಮದ ಪರಿಣಾಮವಾಗಿ 1853 ರ ಪ್ರೆಸ್ ಗ್ಯಾಗಿಂಗ್ಗ ಕಾಯ್ದೆ ಮತ್ತು 1876 ರಲ್ಲಿ ವರ್ನಾಕ್ಯುಲರ್ ಪ್ರೆಸ್ ಕಾಯ್ದೆಗಳನ್ನು ಜಾರಿಗೆ ತಂದು ಪತ್ರಿಕೆಗಳ ಮೇಲೆ ನಿಭಂಧವನ್ನು ಹೇರಲಾಯಿತು.

ಪತ್ರಿಕೆ ಮತ್ತು ಮುದ್ರಣ ಯಂತ್ರ ಅವಿನಾಭಾವ ಸಂಬಂಧ ಇರುವುದರಿಂದ ಕನ್ನಡ ಭಾಷೆಯ ಮುದ್ರಣ ಕಾರ್ಯದ ಬಗ್ಗೆ ಗಮನಿಸುವುದಾದರೆ, ಮೊದಲು ಕನ್ನಡ ಲಿಪಿಯ ಮೊಳೆಗಳನ್ನು ತಯಾರಿಸಿದ ಗೋನ್ಸಾಲಿಸ್, ಕನ್ನಡದಲ್ಲಿ ಅಚ್ಚಿನ ಮೊಳೆಗಳ ರೂಪನಾ ಕಾರ್ಯ ಮುಗಿದದ್ದೆ ಬಂಗಾಳದ ಶ್ರೀರಾಮಪೂರದ ಮುದ್ರಣಾಲಯದಲ್ಲಿ ಮೊದಲ ಕನ್ನಡ ಪುಸ್ತಕ ಮುದ್ರಣಗೊಂಡಿತು. 'ಂ ಉಡಿಚಿಟಟಜಿ ಠಜ ಣುಜ ಏಚಿಡಿಟಚಿಣಚಿಞಚಿ ಐಚಿಟರಿಣಚಿರಿಜ' 1817, ಈ ಪುಸ್ತಕದ ಕರ್ತೃ ವಿಲಿಯಂ ಕೇಲಿ ಯಾಗಿದ್ದು ಇದೇ ಮುದ್ರಣಾಲಯದಲ್ಲಿ ಕನ್ನಡ ಬೈಬಲ್ ಮುದ್ರಣಗೊಂಡಿತೆಂದು ಹೇಳಲಾಗಿದೆ. ನಂತರದ ದಿನಗಳಲ್ಲಿ ಕರ್ನಾಟಕದ ಬೆಂಗಳೂರು, ಬಳ್ಳಾರಿ, ಮಂಗಳೂರು ಮೊದಲಾದೆಡೆ ಕನ್ನಡ ಮುದ್ರಣಾಲಯಗಳು ಪ್ರಾರಂಭಗೊಂಡವು. 1841 ರಲ್ಲಿ ಮಂಗಳೂರಲ್ಲಿ ಮುದ್ರಣಾಲಯ ಕಾರ್ಯ ಪ್ರಾರಂಭವಾಗಿ 1843 ರಲ್ಲಿ ಮಂಗಳೂರು ಸಮಾಚಾರ ಪತ್ರಿಕೆಯನ್ನು ಪ್ರಾರಂಭವಾಯಿತೆಂದು ಕಾಣುತ್ತೇವೆ. ಭಾರತದ ಪತ್ರಿಕೆಗಳ ಯುಗಾರಂಭವಾದಂತೆ ಕರ್ನಾಟಕದಲ್ಲಿಯೂ ಹಲವಾರು ಪತ್ರಿಕೆಗಳು ಜನ್ಮತಾಳಿದವು.[3] ಕನ್ನಡ ಪತ್ರಿಕೆಗಳು 'ಮಂಗಳೂರು ಸಮಾಚಾರ' ಕನ್ನಡದ ಮೊದಲ ಪತ್ರಿಕೆ, ಈ ಪತ್ರಿಕೆಯ ಪ್ರಕಟಣೆ ಪ್ರಾರಂಭವಾದದ್ದು 1843 ರ ಜುಲೈ 1, ಇದರ ಸಂಪಾದಕ ಜರ್ಮನಿಯ ಕ್ರೈಸ್ತ ಧರ್ಮ ಪ್ರಚಾರಕ ಫೆಡ್ರಿಕ್ ಮೊಗ್ಲಿಂಗ್, ಆಗಿದ್ದಾರೆ. ಅಂತೆಯೇ ಈ ದಿನವನ್ನು ಕರ್ನಾಟಕದಲ್ಲಿ ಪತ್ರಿಕಾ ದಿನಾಚರಣೆಯನ್ನಾಗಿ ಆಚರಿಸುತ್ತಿದ್ದೇವೆ.

ಇವರ ಮುಖ್ಯ ಉದ್ದೇಶ ಕ್ರೈಸ್ತ ಧರ್ಮದ ಪ್ರಚಾರ ಹಾಗೂ ಸರ್ಕಾರದ ಆದೇಶಗಳ ಪ್ರಚಾರ ಆಗಿತ್ತು. ಇದು ಒಂದು ವರ್ಷದ ಬಳಿಕ ಬಳ್ಳಾರಿಗೆ ವರ್ಗಾವಣೆಗೊಂಡು ಕನ್ನಡ ಸಮಾಚಾರ ಎಂಬ ಹೆಸರಿನೊಂದಿಗೆ ಪ್ರಾರಂಭವಾಯಿತು.[4] ತದನಂತರದಲ್ಲಿ ಕರ್ನಾಟಕದ ವಿಭಾಗಗಳಾದ ಮೈಸೂರು, ಹೈದ್ರಾಬಾದ ಕರ್ನಾಟಕ, ಮುಂಬೈ ಕರ್ನಾಟಕ ಹಾಗೂ ಮದ್ರಾಸ್ ರೆಸಿಡೆನ್ಸಿಗಳ ವ್ಯಾಪ್ತಿಗೆ ಒಳಪಟ್ಟ ಪ್ರದೇಶಗಳಲ್ಲಿ ಪತ್ರಿಕೆಗಳು ಬೆಳೆದು ಬಂದವು. ಮೈಸೂರು ಸಂಸ್ಥಾನದ ಅಡಿಯಲ್ಲಿ ಮೈಸೂರು ಮತ್ತು ಬೆಂಗಳೂರು ಮುಂಬೈ ಕರ್ನಾಟಕದಲ್ಲಿ ಬೆಳಗಾವಿ, ಧಾರವಾಡ ಹಾಗೂ ಹುಬ್ಬಳ್ಳಿ, ಮದ್ರಾಸ, ಗುಲಬುರ್ಗಾ, ಹೈದ್ರಾಬಾದ ಮೊದಲಾದ ಪ್ರದೇಶಗಳು ಪ್ರಮುಖ ಪತ್ರಿಕಾ ಪ್ರಕಟಣಾ ಕೇಂದ್ರವಾಗಿದ್ದವು.

ಪತ್ರಿಕೆಗಳು ಪ್ರಾರಂಭದ ದಿನಗಳಲ್ಲಿ ಬ್ರಿಟೀಷ ಆಳ್ವಿಕೆಯ ಅಡಿಯಲ್ಲಿ ಉದಯಗೊಂಡಿದ್ದರಿಂದ ಹಲವಾರು ಸಮಸ್ಯೆಗಳನ್ನು ಎದುರಿಸಬೇಕಿತ್ತು, ಇಂತಹ ಸಮಸ್ಯೆಗಳನ್ನು ಮೆಟ್ಟಿನಿಂತ ಕರ್ನಾಟಕದ ಪತ್ರಿಕೆಗಳು ಗಾಂಧಿಜಿ ಮತ್ತು ಬಾಲಗಂಗಾಧರ ತಿಲಕರ ನೇತೃತ್ವದಲ್ಲಿ ನಡೆದ ಸ್ವಾತಂತ್ರ್ಯ ಆಂದೋಲನದ ಸಂದರ್ಭದಲ್ಲಿ ಪ್ರಮುಖ ಪಾತ್ರ ನಿರ್ವಹಿಸಿದವು.

1849 ರಲ್ಲಿ ಸುಧಾಕರ ದೀರ ಪ್ರಕಾಶನ ಎಂಬ ಮೊದಲ ವಾರ ಪತ್ರಿಕೆಯು ಪ್ರಾರಂಭವಾಯಿತು. 19 ನೇ ಶತಮಾನದ ಮಧ್ಯಭಾಗದಲ್ಲಿ ಮೈಸೂರಿನಲ್ಲಿ ಮೈಸೂರು ವೃತ್ತಾಂತ ಬೋದಿನಿ ಎಂಬ ವಾರಪತ್ರಿಕೆ, 1859 ರಲ್ಲಿ ಪ್ರಾರಂಭವಾಯಿತು. ಈ ಪತ್ರಿಕೆಯ ಸಂಪಾದಕರಾಗಿ ಭಾಷನ್ .ಟಿ. ತಿರುಮಲಾಚಾರ್ಯ ಕಾರ್ಯನಿರ್ವಹಿಸಿದರೆ, ಮೈಸೂರಿನ ಮಹಾರಾಜರು ಇದನ್ನು ಪೋಷಿಸಿದರು. ಈ ಪತ್ರಕೆಯು ಸರ್ಕಾರದ ಚಟುವಟಿಕೆಗಳನ್ನು ಪ್ರಚಾರ ಪಡಿಸುತ್ತಿತ್ತು. ಇದು 1864 ರ ವರೆಗೆ ಅಸ್ತಿತ್ವದಲ್ಲಿತ್ತು, ಮೈಸೂರು ಸರ್ಕಾರವು ಮೈಸೂರು ಗೆಜೆಟ್ ಎಂಬ ಆಂಗ್ಲೋ ಕನ್ನಡ ವಾರಪತ್ರಿಕೆಯನ್ನು 1866 ರಲ್ಲಿ ಪ್ರಕಟಿಸಿತು. ಈ ಪತ್ರಿಕೆಯು ಕೇವಲ ಸರ್ಕಾರಿ ಆದೇಶಗಳಿಗೆ ಸೀಮಿತವಾಗಿರದೆ ಇತರೆ ಸುದ್ದಿಯನ್ನೊಳಗೊಂಡು ಬ್ರಿಟೀಷ ಆಡಳಿತ ನೀತಿಯನ್ನು ವಿಮರ್ಶಿಸುತ್ತಿತ್ತು. ಕನ್ನಡದ ಮೊದಲ ದಿನ ಪತ್ರಿಕೆಯು 1888 ರಲ್ಲಿ ಬಿ. ನರಸಿಂಗರಾವ ರವರ ಸಂಪಾದಕತ್ವದಲ್ಲಿ ಬೆಂಗಳೂರಿನಲ್ಲಿ ಪ್ರಕಟಗೊಂಡಿತು. ಆದರೆ ಬಹುಬೇಗನೆ ಹಣಕಾಸಿನ ತೊಂದರೆಯಿಂದಾಗಿ ಇದು ವಾರಪತ್ರಿಕೆಯಾಗಿ ರೂಪಗೊಂಡಿತು.[5]

1880 ರಿಂದ 1908 ರ ಕಾಲಘಟ್ಟದಲ್ಲಿ ಕನ್ನಡ ಪತ್ರಿಕೋದ್ಯಮದಲ್ಲಿ ಮಹತ್ತರವಾದ ಬದಲಾವಣೆ ಉಂಟಾಯಿತೆನ್ನಬಹುದು ಏಕೆಂದರೆ ಇಲ್ಲಿ ಬಹುಸಂಖ್ಯೆಯ ಕನ್ನಡ ಪತ್ರಿಕೆಗಳು ಉದಯಿಸಿದ್ದು ಅವುಗಳಲ್ಲಿ ಪ್ರಮುಖವಾದವುಗಳೆಂದರೆ ಕನ್ನಡ ಕೇಸರಿ ಹುಬ್ಬಳ್ಳಿ 1888, ಒಕ್ಕಲಿಗ ಪತ್ರಿಕೆ ಬೆಂಗಳೂರು 1907, ಅರ್ಥಸಾಧಕ ಪತ್ರಿಕೆ 1914, ಶಗ್ಯೋದಯ ಪತ್ರಿಕೆ ಶಿವಮೊಗ್ಗ 1914, ಕರ್ನಾಟಕ ನಂದಿನಿ ಮೈಸೂರು 1916, ಸಾರಣಾಚಾರ್ಯ ಸಂಗ್ರಹ ಬೆಂಗಳೂರು 1907, ಸುಮತಿ ಬೆಂಗಳೂರು 1909, ಜಯಕರ್ನಾಟಕ 1922, ಧರ್ನೋದ್ದಾರಿ, ವೀರಕೇಸರಿ, ಚಂದ್ರೋದಯ 1913, ಕರ್ಮವೀರ 1921, ಸುಚಿತ್ರ ಭಾರತ 1913, ಶೂಭೋದಯ 1917, ವಿಜಯ 1921 ಈ ಪತ್ರಿಕೆಗಳೆಲ್ಲವು ಧಾರವಾಡದಿಂದ ಪ್ರಕಟಗೊಂಡರೆ, ಕರನಾಡಿನ 1925 ರಲ್ಲಿ ಬಾಗಲಕೋಟದಿಂದ ಮುದ್ರಣಗೊಂಡಿತು.[6] ವಿಶ್ವಕರ್ನಾಟಕ 1921 ರಲ್ಲಿ ತಿರುಮಲಾಚಾರ್ಯರಿಂದ ಪ್ರಕಟಗೊಂಡು 2 ದಶಕಗಳ ಕಾಲ ತನ್ನದೇ ಆದ ವಿಶಿಷ್ಟ ಪ್ರಕಟಣೆಗಳ ಮೂಲಕ ಬ್ರಿಟೀಷ ದೊರಣೆಗಳನ್ನು ಖಂಡಿಸಿ 1929 ರಲ್ಲಿ ರಾಜ್ಯ ಸರ್ಕಾರದಿಂದ ಹತ್ತಿಕ್ಕಲ್ಪಟ್ಟಿತು. ಬ್ರಿಟೀಷ ವಿರೋಧಿ ನಿಲುವುವನ್ನು ಬೆಂಗಳೂರು ರೈತ ವರದಿಗಳನ್ನು ಉಲ್ಲೇಖಿಸಿ ಖಂಡಿಸಿದ್ದಕ್ಕಾಗಿ ವೀರಕೇಸರಿ ಮತ್ತು ನವಜೀವನ ಪತ್ರಿಕೆಯ ಸಂಪಾದಕರುಗಳಾದ ಸಿದ್ದರಾಮ ಶಾಸ್ತ್ರಿ ಮತ್ತು ಸ್ವಾತಿ ನಾರಾಯಣರಾಯರವರನ್ನು ಕಾರಾಗ್ರಹಕ್ಕೆ ಕಳುಹಿಸಲಾಯಿತು. 1942 ರಲ್ಲಿ ಭಾರತ ಬಿಟ್ಟು ತೊಲಗಿ ಚಳುವಳಿಯಲ್ಲಿ ಬರೆದ ಲೇಖನಗಳಿಂದಾಗಿ ಮತ್ತೆ 1944 ರಲ್ಲಿ ಪುನಃ ಇದರ ಮೇಲೆ ದಿಗ್ಬಂದನ ಹೇರಲಾಯಿತು.[7] (ನೇರವಾಗಿ ವೈಸರಾಯನಿಗೆ ಪತ್ರ

ಬರೆದಿದ್ದಕ್ಕಾಗಿ) 1926 ರಲ್ಲಿ ಮೈಸೂರಲ್ಲಿ ಪಿ ಆರ್ ರಾಮಯ್ಯನವರಿಂದ ಪ್ರಾರಂಭವಾದ ತಾಯಿನಾಡು ಪತ್ರಿಕೆಯು ಮತ್ತೊಂದು ಮಹತ್ವದ ಪತ್ರಿಕೆಯಾಗಿದೆ, ಇದು ಆರಂಭದಲ್ಲಿ ವಾರಪತ್ರಿಕೆಯಾಗಿ ನಂತರದಲ್ಲಿ ಬೆಂಗಳೂರಿಗೆ ಸ್ಥಳಾಂತರಗೊಂಡು ದಿನ ಪತ್ರಿಕೆಯಾಗಿ ಕಾರ್ಯನಿರ್ವಹಿಸಿತು. ಇದು ರಾಜ್ಯದಲ್ಲಿ ಜವಾಬ್ದಾರಿಯುತ ಸರ್ಕಾರ ಸ್ಥಾಪನೆಗಾಗಿ ಹೋರಾಡಿತು. ಇದರ ಸಂಪಾದಕರಾದ ಪಿ ಹೆಚ್ ಶ್ರೀನಿವಾಸ ಹಾಗೂ ರಾಮಯ್ಯರವರನ್ನು 1943 ರಲ್ಲಿ ಸೆರೆಮನೆಗೆ ತಳ್ಳಲಾಯಿತು. ಈ ಪತ್ರಿಕೆಯು 1952 ರಲ್ಲಿ ಬೆಳ್ಳಿ ಹಬ್ಬವನ್ನು ಆಚರಿಸಿಕೊಂಡಿತು.[8]

ಭಲವಂತರಾವ ಜಾತರ ಅವರಿಂದ ಧನಂಜಯ ದಿನಪತ್ರಿಕೆ 1895, ಹೊನ್ನಾಪೂರಮಠ ಇವರಿಂದ ವಾಘಭೂಷಣ 1896, ವಾಘದೇವಿ 1916, ಈ ಪತ್ರಿಕೆಗಳು ಸ್ವಾತಂತ್ರ್ಯ ಹೋರಾಟದ ಬಗೆಗೆ ಸ್ಫೂರ್ತಿದಾಯಕ ಲೇಖನಗಳ ಮೂಲಕ ಜನರನ್ನು ಸ್ವಾತಂತ್ರ್ಯ ಆಂದೋಲನದಲ್ಲಿ ದುಮುಕುವಂತೆ ಮಾಡಿದವು. ಅಂತಹದೆ ಆದ ರಾಜಹಂಸ ಎಂಬ ವಾರಪತ್ರಿಕೆಯು, ರಾಮರಾವ ದೇಸಾಯಿ, ಹರಿಬಾವು ಜಾಂಬೆಕರ, ರಾಮರಾವ ಬಳ್ಳಾರಿ ಹಾಗೂ ವಾಮನರಾವ ಜಾತರ ರವರಿಂದ 1891 ರಲ್ಲಿ ಪ್ರಾರಂಭವಾದ ವಾರಪತ್ರಿಕೆಯು ಬ್ರಿಟೀಷ ಆಡಳಿತ ದರ್ಪದ ವಿರುದ್ಧ ಸ್ಥಳೀಯರಲ್ಲಿ ಜಾಗೃತಿ ಮೂಡಿಸಲಾರಂಬಿಸಿತು. ಕೆಲವು ಕಾಲದ ನಂತರ ಇದರ ಜವಾಬ್ದಾರಿ ವಾಮನರಾವ ಜಾತರರವರ ಹೇಗಲ ಮೇಲೆ ಬಿದ್ದಿತು. ಆಗ ಧಾರವಾಡ ದೇಸಾಯಿ ಗಲ್ಲಿಯಲ್ಲಿ ತನ್ನ ಕಛೇರಿ ಮೂಲಕ ಕಾರ್ಯ ಪ್ರಾರಂಭಿಸಿದ ಈ ಪತ್ರಿಕೆಯು ನಿರ್ಭಿತಿಯಿಂದ ಬ್ರಿಟೀಷರ ದುಷ್ಟ ಕೃತ್ಯಗಳನ್ನು ಖಂಡಿಸಿ ಸಂಪಾದಕೀಯ ಲೇಖನಗಳನ್ನು ಪ್ರಕಟಿಸಿತು. ಅಲ್ಲದೆ ಜನರ ಬೇಕು–ಬೇಡಗಳನ್ನು ಹಾಗೂ ಜನರ ದೂರು, ಕಷ್ಟಗಳನ್ನು ಪ್ರಕಟಿಸುತ್ತಾ ಜನರಲ್ಲಿ ರಾಷ್ಟ್ರೀಯ ಆಂದೋಲನದ ಅರಿವು ಮೂಡಿಸಿತು. 1898 ರಲ್ಲಿ ಭವಾನಿ ತಳವಾರ ಎಂಬ ರಾಷ್ಟ್ರೀಯ ಗೀತೆಯನ್ನು (ಶಿವಾಜಿ ಮಹಾರಾಜರಿಗೆ ಕುರಿತಾದ ಗೀತೆ) ಪ್ರಕಟಿಸುವ ಮೂಲಕ ಬಿಟೀಷರ ಕೆಂಗಣ್ಣಿಗೆ ಗುರಿಯಾಯಿತು. ಇದರಿಂದ ಬ್ರಿಟೀಷ ಸರ್ಕಾರ ಪತ್ರಿಕೆಯಲ್ಲಿ ಪ್ರಕಟವಾದ ಕವಿತೆ ಮತ್ತು ಕವಿಯನ್ನು ಬಂಧಿಸಲು ಧಾರವಾಡದ ಡಿ.ಎಸ್.ಪಿ. ಮತ್ತು ಒಂದು ನೂರು ಪೋಲೀಸ್‌ರೊಂದಿಗೆ ಆಗಮಿಸಿ ಇಡಿ ದೇಸಾಯಿ ಗಲ್ಲಿಯನ್ನು ಮೂರು ಘಂಟೆಗಳ ಕಾಲ ಹುಡಿಕಿದರು ಮೂಲ ಪ್ರತಿ ಸೀಗದೆ ನಿರಾಸೆಯರಾಗಿದ್ದು ತಿಳಿದುಬರುತ್ತದೆ. ಮೊದಲನೆ ಜಾಗತೀಕ ಯುದ್ದದ ಘಟನಾವಳಿಗಳನ್ನು ಮತ್ತು ಬಾಲ ಗಂಗಾಧರ ತಿಲಕರವರ ರಾಷ್ಟ್ರೀಯ ಹೋರಾಟಗಳನ್ನು ಕುರಿತು ಕನ್ನಡದಲ್ಲಿ ಪ್ರಕಟಿಸಿದರಿಂದ ಇದು ಬಹುಬೇಗ ಜನರ ಮೆಚ್ಚುಗೆಯನ್ನು ಪಡೆಯಿತು. ಇದು ಕೇವಲ ಪತ್ರಿಕೆಗಳನ್ನು ಪ್ರಕಟಿಸುದಲ್ಲದೆ ಆರ್ ಆರ್ ದಿವಾಕರ, ಮಾಧವರಾವ ಕಬ್ಬೂರ, ಗೋವಿಂದ ಆಚಾರ್ಯ ಗುಟ್ಟಲ ರಂತಹ ಮಹನಿಯರಿಗೆ ಲೇಖನಗಳನ್ನು ಬರೆಯಲು ಅವಕಾಶ ಕಲ್ಪಿಸು ಮೂಲಕ ರಾಜಕೀಯ ಶಿಕ್ಷಣವನ್ನು ನೀಡಿತು ಎನ್ನಬಹುದಾಗಿದೆ. 1923–26 ರ ಚುಣಾವಣೆಯಲ್ಲಿ ಸ್ವರಾಜ ಪಾರ್ಟಿಯ ಸದಸ್ಯರ ಪರ ಪ್ರಚಾರ, 1930 ರ ಉಪ್ಪಿನ ಸತ್ಯಾಗ್ರಹ, 1931–32 ರ ಕಾನೂನು ಭಂಗ ಚಳುವಳಿಯಲ್ಲಿ ನೀಡಿದ ಹೋರಾಟ ಪರ ಪ್ರಚಾರ ಹಾಗೂ ಶಿರಸಿ, ಸಿದ್ದಾಪೂರ, ಅಂಕೋಲಾಗಳಲ್ಲಿ ನಡೆದ ತೆರಿಗೆ ನಿರಾಕರಣೆ ಚಳುವಳಿಯ ಸಂಧರ್ಭದಲ್ಲಿ ಮಾಡಿದ ಪ್ರಚಾರವು ಬ್ರಟೀಷರ ನಿದ್ದೆಗೆಡೆಸಿತು, ಆಗ 1932 ಫೆಬ್ರವರಿ 12 ರಂದು ರಾಜಹಂಸ ಪತ್ರಿಕೆಯ ಕಛೇರಿಯ ಮೇಲೆ ದಾಳಿಮಾಡಿದರು, ಯಾವುದೆ ತರಹದ ಕರಪತ್ರಗಳು ಸಿಗದೆ ಇರುವುದು ಗಮನಾರ್ಹ, ಧಾರವಾಡದ ಕರ್ನಾಟಕದ ಕಾಂಗ್ರೇಸ್ ಕಮಿಟಿ ಕಛೇರಿಯಲ್ಲಿ ಒಂದು ಅಥಿಭಿಟಥಣಥಿಟಜ ಒಚಿಛಿಟುಟಜ ಇತ್ತು, ಬ್ರಿಟೀಷ ಸರ್ಕಾರ ಎಲ್ಲಾ ಕಾಂಗ್ರೇಸ್ ಕಛೇರಿಗಳನ್ನು ಬಂದಮಾಡಿ ಕೀಲಿಹಾಕಲು ಸೂಚಿಸಿತು. ಆದರೆ ಧಾರವಾಡದ ಕಛೇರಿಯನ್ನು ಮುಚ್ಚುವ ಮುನ್ನವೇ ಅಥಿಭಿಟಥಣಥಿಟಜ ಒಚಿಛಿಟುಟಜ ವನ್ನು ಸ್ಥಳಾಂತರಿಸಿ ಈ ಕುರಿತಂತೆ ಕರಪತ್ರಗಳನ್ನು ತಯಾರಿಸಿ ಹಂಚಲಾಯಿತು. ಈ ಸಂದರ್ಭದಲ್ಲಿ ರಾಜಹಂಸ ಪತ್ರಿಕೆಯ ಕಛೇರಿಗಳನ್ನು ಪರಿಶೀಲಿಸಲಾಗಿ ಯಾವುದೇ ದಾಖಲೆಗಳನ್ನು ದೊರೆಯಲಿಲ್ಲ ಹೀಗೆ ಸ್ವಾತಂತ್ರ್ಯ ಆಂದೋಲನದಲ್ಲಿ ಕೇವಲ ಲೇಖನಗಳನ್ನು ಪ್ರಕಟಿಸುವುದು ಅಷ್ಟೆ ಅಲ್ಲದೆ ಚಳುವಳಿಗಾರರಿಗೆ ರಾಜಕೀಯ ಶಿಕ್ಷಣ ಮತ್ತು ಅಗತ್ಯ ಪ್ರೋತ್ಸಾಹಗಳನ್ನು ನೀಡುತ್ತಾಬಂದ ಹಿರಿಮೆ ಇದರದ್ದಾಗಿದೆ.[9]

ವೆಂಕಟ ಕೃಷ್ಣಯ್ಯ 1844 ರಿಂದ 1933 ರ ವರೆಗೆ ವೆಂಕಟ ಕೃಷ್ಣಯ್ಯನವರು ತಮ್ಮ ಲೇಖನಿ ಹಾಗೂ ಲೇಖನಗಳಿಂದ ಬ್ರಿಟೀಷರ ವಿರುದ್ದ ಹೋರಾಡಿದ ಮಹನಿಯ ಎಂದು ಹೇಳಬಹುದು ಇವರು 1885 ರಲ್ಲಿ ಮೈಸೂರಿನಲ್ಲಿ ಪ್ರಾರಂಭಿಸಿದ ವೃತ್ತಾಂತ ಚಿಂತಾಮಣಿಯು ಬಹು ಪ್ರಮುಖವಾದ ಪತ್ರಿಕೆಯಾಗಿತ್ತು. ಇವರ ಲೇಖನಗಳು ಸರಳ ಮತ್ತು ಸುಲಭ ಶೈಲಿಯಲ್ಲಿ ಇದ್ದುದರಿಂದ ಜನರ ಮನ ಸೆಳೆಯುದರಲ್ಲಿ ಸಫಲವಾಗಿದ್ದವು, ಮೈಸೂರು ಪ್ರಜಾಪ್ರತಿನಿಧಿ ಸಭೆಯ ಸದಸ್ಯರಾಗಿದ್ದರು. ಇವರು ಶಿಕ್ಷಣ ಪ್ರೇಮಿ ಆಗಿದ್ದರಿಂದ ಅನೇಕ ವಿದ್ಯಾರ್ಥಿಗಳ ವಸತಿ ನಿಲಯ ಶಾಲೆ–ಕಾಲೇಜುಗಳ ಸ್ಥಾಪನೆ, ವಿಶ್ವವಿದ್ಯಾಲಯಕ್ಕೆ ಧನ ಸಹಾಯ ಮಾಡಿದ್ದಲ್ಲದೆ, ಪತ್ರಿಕೋದ್ಯಮದಲ್ಲಿ ಒಂದು ತರಬೇತಿಯನ್ನು ಪ್ರಾರಂಭಿಸಿ ಅಲ್ಲಿ ಅಧ್ಯಯನ ಮಾಡಿದವರಿಗೆ ಬಹುಮಾನವನ್ನು ನೀಡುತ್ತಿದ್ದರು. ಸುಮಾರು ಮೂವತ್ತು ವರ್ಷಗಳ ನಂತರ ಮೈಸೂರು ವಿಶ್ವವಿದ್ಯಾಲಯವು ಪತ್ರಿಕೋದ್ಯಮ ವಿಭಾಗವನ್ನು ಪ್ರಾರಂಭಿಸಿದ್ದನ್ನು ಕಾಣುತ್ತೇವೆ.[10] ಬ್ರಿಟೀಷರ ಆಳ್ವಿಕೆಯ ಅವಧಿಯಲ್ಲಿ ಮೈಸೂರು ಪ್ರಾಂತದಲ್ಲಿ ಹತ್ತಕ್ಕೂ ಹೆಚ್ಚು ಪತ್ರಿಕೆಗಳು ಕನ್ನಡ ಮತ್ತು ಇಂಗ್ಲೀಷ ಭಾಷೆಯಲ್ಲಿ ಪ್ರಕಟವಾಗುತ್ತಿದ್ದವು, ಅವುಗಳಲ್ಲಿ ಪ್ರಮುಖವಾದ ಕನ್ನಡ ಪತ್ರಿಕೆಗಳೆಂದರೆ, 1912 ರಲ್ಲಿ ಪ್ರಾರಂಭವಾದ ಸಂಪದಾಭುದಯಂ ದಿನಪತ್ರಿಕೆ, ಸಾಧ್ವಿ ಎಂಬ ವಾರಪತ್ರಿಕೆ, ವೆಂಕಟ ಕೃಷ್ಣಯ್ಯರವರಿಂದ ತರಬೇತಿ ಪಡೆದ ಎಮ್ ಗೋಪಾಲ ಅಯ್ಯಂಗಾರ ಮತ್ತು ಎಮ್ ಶ್ರೀನಿವಾಸ ಅಯ್ಯಂಗಾರ ಕನ್ನಡ ನಡೆಗನ್ನಡಿ ಎಂಬ ಪತ್ರಿಕೆಯನ್ನು 1895 ರಲ್ಲಿ ಬೆಂಗಳೂರಿನಲ್ಲಿ ಪ್ರಾರಂಭಿಸಿದರು, ಇದು ಓದುಗರ ಮೇಲೆ ಹೆಚ್ಚು ಪ್ರಭಾವಬೀರಿತು.

1908 ರಲ್ಲಿ ಮೈಸೂರು ಸಂಸ್ಥಾನ ಪತ್ರಿಕಾ ನಿಯಂತ್ರಣ ಶಾಸನವನ್ನು ಜಾರಿಗೆ ತಂದಿತು. ಇದರನ್ವಯ ಚಾಲ್ತಿಯಲ್ಲಿರುವ ಪತ್ರಿಕೆಗಳು ಬ್ರಿಟೀಷರ (ಮೈಸೂರು ಸರ್ಕಾರದ) ಪೂರ್ವಾನುಮತಿ ಪಡೆದುಕೊಳ್ಳಲು ನಿರ್ದೇಶಿಸಿಲಾಯಿತು. ಅಲ್ಲದೆ ಹೊಸ ಪತ್ರಿಕೆಗಳು ಬ್ರಿಟೀಷರ ಪೂರ್ವಾನುಮತಿ ಪಡೆಯುವುದು ಅನಿವಾರ್ಯವಾಯಿತು. ಈ ಕಾರಣದಿಂದಾಗಿ 1907 ರಲ್ಲಿ ಪ್ರಾರಂಭವಾಗಿದ್ದ ಶರತಿ ಎಂಬ ದಿನಪತ್ರಿಕೆಯನ್ನು ಮುಚ್ಚಲಾಯಿತು. ಇದನ್ನು ವಿರೋಧಿಸಿ ವೆಂಕಟ ಕೃಷ್ಣಯ್ಯನವರು ಪತ್ರಿಕಾ ನಿರ್ಭಂದ ಶಾಸನ ವಿರುದ್ಧ ಪತ್ರಿಕೆಗಳನ್ನು ಸ್ಥಗಿತಗೊಳಿಸುವ ಮೂಲಕ ಪ್ರತಿಭಟಿಸಿದರು. ಸರ್ ಎಮ್ ವಿಶ್ವೇಶ್ವರಯ್ಯನವರು ದಿವಾನರಾಗಿದ್ದಾಗ ಪತ್ರಿಕಾ ನಿಯಂತ್ರಣ ಶಾಸನದಲ್ಲಿ ಕೆಲವು ಮಾರ್ಪಾಡುಗಳು ಮಾಡಿದ್ದರಿಂದ ಪುನಃ ಪತ್ರಿಕೆಗಳನ್ನು ಪ್ರಕಟಿಸಲಾರಂಭಿಸಿದರು.[11]

ಸ್ವಾತಂತ್ರ್ಯ ಆಂದೋಲನದಲ್ಲಿ ಪ್ರಮುಖ ಪಾತ್ರವನ್ನು ವಹಿಸಿದ ಮತ್ತೊಂದು ಪತ್ರಿಕೆ ಎಂದರೆ ಸಂಯುಕ್ತ ಕರ್ನಾಟಕ ಇದು ಬೆಳಗಾವಿಯಲ್ಲಿ 1929 ರಲ್ಲಿ ವಾರಪತ್ರಿಕೆಯಾಗಿ ಪ್ರಾರಂಭವಾಗಿ 1933 ರಲ್ಲಿ ಹುಬ್ಬಳ್ಳಿಗೆ ವರ್ಗಾವಣೆಗೊಂಡು ದಿನಪತ್ರಿಕೆಯಾಗಿ ಪರಿವರ್ತನೆಯಾಯಿತು. ಈ ಪತ್ರಿಕೆಯನ್ನು ಪ್ರಾರಂಭಿಸುವಲ್ಲಿ ಕಬ್ಬೂರು ಮಾಧವರಾವ ಮತ್ತು ರಾಮರೇ ಹುಕ್ಕುನಕರ ಮತ್ತು ಆರ್ ಆರ್ ದಿವಾಕರ ರವರ ಪಾತ್ರ ಮಹತ್ವದ್ದು, ಇದರ ಪ್ರಮುಖ ಸಂಪಾದಕರಾದ ಎಚ್ ಆರ್. ಮೋರೆ ಮೂಲತಃ ಪತ್ರಕರ್ತರ ಕುಟುಂಬದವರಾದ ಇವರ ನೇತೃತ್ವದಲ್ಲಿ ಬೆಳೆದ ಈ ಪತ್ರಿಕೆಯು ಕನ್ನಡ ಪತ್ರಿಕೊದ್ಯಮದಲ್ಲಿ ವಿಶಿಷ್ಟ ಸ್ಥಾನವನ್ನು ಪಡೆದಿದೆ. ಇವರ ಪೂರ್ವಜರು

ಬಿಜಾಪೂರದಲ್ಲಿ ಕರ್ನಾಟಕ ವೈಭವ ಪತ್ರಿಕೆಯ ಸ್ಥಾಪನೆಗೆ ಕಾರಣೀಕರ್ತರಾಗಿದ್ದರೆಂದು ತಿಳಿದುಬರುತ್ತದೆ. ಮೋರೆಯವರು ನಿರಂತರ ಪರಿಶ್ರಮದ ಫಲವಾಗಿ ಪತ್ರಿಕೆಯು ಸ್ವಾತಂತ್ರ್ಯ ಆಂದೋಲನದಲ್ಲಿ ಮಹತ್ವದೆಂದು ಗುರ್ತಿಸಲಾಗಿದೆ. ದೇಶ ಸ್ವಾತಂತ್ರ್ಯವಾದ ನಂತರ ಮೋರೆಯವರ ಕಾರ್ಯವೈಖರಿಯನ್ನು ಗಮನಿಸಿ ಇವರನ್ನು ಪಿ.ಟಿ.ಐ (ಕಡಿಫ ಖಡಿಣಾ ಠಜಿ ಖಟಿಜುಚಿ) ದ ನಿರ್ದೇಶಕರನ್ನಾಗಿ ಹಾಗೂ ಭಾರತ ಮತ್ತು ಪೂರ್ವರಾಷ್ಟ್ರಗಳ ವಾರ್ತಾ ಪತ್ರಿಕೆಗಳ ಸಂಘದ ಅಧ್ಯಕ್ಷರನ್ನಾಗಿ ನೇಮಿಸಿರುವುದನ್ನು ಕಾಣುತ್ತೇವೆ. ಸ್ವಾತಂತ್ರ್ಯ ನಂತರದ ದಿನಗಳಲ್ಲಿ ಹೈದ್ರಾಬಾದನಲ್ಲಿ ಆದ ಪೋಲೀಶ್ ಕಾರ್ಯಾಚರಣೆಯ ಸಂದರ್ಭದಲ್ಲಿ ಮಹತ್ವದ ಪಾತ್ರವನ್ನು ವಹಿಸಿತು. ತತ್ತಪರಿಣಾಮವಾಗಿ ಗುಲಬುರ್ಗಾ ಹಾಗೂ ಹೈದ್ರಾಬಾದ ಇತರ ಪ್ರದೇಶದಲ್ಲಿ ಹೈದ್ರಾಬಾದ ನಿಜಾಮನು ಸಂಯುಕ್ತ ಕರ್ನಾಟಕ ಪತ್ರಿಕೆಯನ್ನು ನಿಷೇಧಿಸಿದನು. ಈ ಸಂದರ್ಭದಲ್ಲಿಯೂ ಮೋರೆಯವರು ಹೈದ್ರಾಬಾದ ನಿಜಾಮನ ಪ್ರದೇಶಗಳಿಗೆ ಗೌಪ್ಯವಾಗಿ ಪತ್ರಿಕೆಗಳನ್ನು ತಲುಪಿಸಿದರು. ಇವರು ಮೂಲತಃ ಸ್ವಾತಂತ್ರ್ಯ ಪಡೆಯುವುದು ಮತ್ತು ಅಖಂಡ ಕರ್ನಾಟಕ ನಿರ್ಮಾಣದ ಕನಸನ್ನು ಹೊಂದಿದ್ದು, ಅವುಗಳನ್ನು ತಮ್ಮ ಜೀವಿತದ ಅವಧಿಯಲ್ಲಿ ಸಾಕ್ಷಾತ್ಕರಿಸಿಕೊಂಡಿದ್ದು ಹೆಮ್ಮೆಯ ಸಂಗತಿಯಾಗಿದೆ. 1960 ರಲ್ಲಿ ಮೋರೆರವರ ನಿಧನದ ನಂತರದಲ್ಲಿ ಸ್ವಲ್ಪ ದಿನಗಳವರೆಗೆ ಸಂಯುಕ್ತ ಕರ್ನಾಟಕ ಪತ್ರಿಕೆಯು ಸ್ವಲ್ಪ ಹಣಕಾಸಿನ ತೊಂದರೆಯನ್ನು ಎದುರಿಸಬೇಕಾಯಿತು. ಅದು ಈಗ ತನ್ನದೆ ಆದ ವಿಶಿಷ್ಟ ಲೇಖನಗಳ ಮೂಲಕ ಕನ್ನಡ ಜನಪ್ರೀಯ ಪತ್ರಿಕೆಯಲ್ಲಿ ಒಂದಾಗಿರುವುದನ್ನು ಕಾಣುತ್ತೇವೆ.[12]

ಕರ್ಮವೀರ ವಾರ ಪತ್ರಿಕೆಯು 1921 ರಲ್ಲಿ ಧಾರವಾಡದಿಂದ ಮಾಧವರಾವ ರವರಿಂದ ಪ್ರಾರಂಭವಾಯಿತು. ಈ ಪತ್ರಿಕೆಯ ಮುಖ್ಯ ಸಂಪಾದಕರಾಗಿ ಆರ್ ಆರ್ ದಿವಾಕರ ಕಾರ್ಯನಿರ್ವಹಿಸಿದರು. ಇದು ಬ್ರಿಟೀಷ ಆಡಳಿತದ ವಿರುದ್ಧ ಪ್ರಕಟಿಸಿದ ಲೇಖನಗಳಿಂದಾಗಿ ಇದರ ಸಂಪಾದಕರಾದ ಆರ್ ಆರ್ ದಿವಾಕರರವರು ಒಂದು ಬಾರಿ ಸೆರೆಮನೆವಾಸ ಅನುಭವಿಸಬೇಕಾಯಿತು. ಇದರ ಕಾರ್ಯಾಲಯವು ಧಾರವಾಡದಿಂದ ಹುಬ್ಬಳ್ಳಿಗೆ ವರ್ಗಾವಣೆಗೊಂಡಿದ್ದು ಇದರ ಪ್ರಮುಖ ಸಂಪಾದಕರಾಗಿ ಎಚ್ ಆರ್ ಪುರೋಹಿತ ರವರು ಸೂಮಾರು ಮೂವತ್ತು ವರ್ಷಗಳ ಕಾಲ ಕಾರ್ಯನಿರ್ವಹಿಸಿದನ್ನು ಕಾಣುತ್ತೇವೆ.

ಪ್ರಜಾಮಾತಾ ಎಂಬ ವಾರಪತ್ರಿಕೆಯು ಬಿ ಎನ್ ಗುಪ್ತಾ ರವರಿಂದ ಮದ್ರಾಸನಲ್ಲಿ 1931 ರಲ್ಲಿ ಪ್ರಾರಂಭಿಸಿದರು ನಂತರದಲ್ಲಿ ಬೆಂಗಳೂರಿಗೆ ವರ್ಗಾಯಿಸಲಾಯಿತು. ಅಲ್ಲಿ ಮೈಸೂರು ರಾಜ್ಯ ಸರ್ಕಾರ ಇದನ್ನು ನಿರ್ಭಂಧಿಸಿದರಿಂದ ಅದು ಹುಬ್ಬಳ್ಳಿಗೆ ವರ್ಗಾವಣೆಗೊಂಡಿತು. ಮೈಸೂರು ಸರ್ಕಾರ ಇದನ್ನು ನಿರ್ಬಂಧಿಸಿದರಿಂದ ಗುಪ್ತಾರವರು ಪತ್ರಿಕೆಯ ಹೆಸರು ಪ್ರಜಾಮಿತ್ರ ಎಂದು ಪರಿವರ್ತಿಸಿ ಪತ್ರಿಕೆಗಳನ್ನು ಮೈಸೂರು ಮತ್ತು ಬೆಂಗಳೂರಿಗೆ ಮಾರಾಟಮಾಡಿದರು ಇವರಿಂದ ಪ್ರಾರಂಭವಾದ ಪ್ರಮುಖ ಪತ್ರಿಕೆ ಎಂದರೆ ಜನವಾಣಿ ಇದು 1934 ರಲ್ಲಿ ಪ್ರಕಟಣೆಗೊಂಡಿತು ಆದರೆ ನಂತರದಲ್ಲಿ ಇದನ್ನು ಮುಂಬೈಯ ಒಬ್ಬ ಉದ್ಯಮಿಗೆ ಮಾರಾಟಮಾಡಲಾಯಿತು.

1941 ರಲ್ಲಿ ಮಂಗಳೂರು ಮೂಲಕ ಪ್ರಕಾಶನಗೊಂಡ ಪತ್ರಿಕೆ ನವಭಾರತ ದಿನಪತ್ರಿಕೆಯನ್ನು ಹೊರತುಪಡಿಸಿದರೆ ಮಂಗಳೂರು ಭಾಗದಲ್ಲಿ ವಸಾಹಿತುಶಾಹಿ ಆಡಳಿತ ಅವಧಿಯಲ್ಲಿ ಯಾವುದೇ ಪತ್ರಿಕೆಗಳು ಇರಲಿಲ್ಲ ಎಂಬುದು ಗಮನಾರ್ಹ

ಮೈಸೂರು ಭಾಗದ ಪತ್ರಿಕೆಗಳು : 1910 ರಿಂದ 1920 ರ ಕಾಲಾವಧಿಯಲ್ಲಿ ಸೂಮಾರು 70 ಪತ್ರಿಕೆಗಳು ಕಾರ್ಯನಿರ್ವಹಿಸುತ್ತಿದ್ದವು, ಅವುಗಳಲ್ಲಿ ಸರಾಸರಿ 500 ರಿಂದ 2000 ಪ್ರತಿಗಳು ಪ್ರಕಟವಾಗುತ್ತಿದ್ದವು ಎಂದು ತಿಳಿದುಬರುತ್ತದೆ. 1931 ರ ವೇಳೆಗೆ 12 ದಿನ ಪತ್ರಿಕೆಗಳು ಹಾಗೂ 22 ನಿಯತಕಾಲಿಕಗಳು ಕನ್ನಡದಲ್ಲಿ ಇದ್ದರೆ, 7 ದಿನ ಪತ್ರಿಕೆಗಳು 19 ನಿಯತಕಾಲಿಕಗಳು ಪ್ರಕಟವಾಗುತ್ತಿದ್ದವು. ಎಂದು ಗೊತ್ತಾಗುತ್ತದೆ. ವೃತ್ತಾಂತ ಪತ್ರಿಕೆ, ಸಾಧ್ವಿ ಪತ್ರಿಕೆ, ಮೈಸೂರು ಸ್ಟಾರ ಮತ್ತು ಒಕ್ಕಲಿಗ ಪತ್ರಿಕೆ ಇವು ಅತಿ ಹೆಚ್ಚು ಮಾರಾಟವಾಗುತ್ತಿದ್ದವು. 1908 ರ ಪತ್ರಿಕಾ ನಿರ್ಭಂಧ ಶಾಸನ ಹಾಗೂ ಸರ್ ಎಮ್ ವಿಶ್ವೇಶ್ವರಯ್ಯರವರು ದಿವಾನರಾಗಿದ್ದಾಗ ಮಾಡಿದ ಪತ್ರಿಕಾ ನಿರ್ಭಂದ ಸುಧಾರಣಾ ಕಾಯ್ದೆಯಿಂದಾಗಿ ಬ್ರಿಟೀಷ ಆಡಳಿತ ವಿರೋಧಿ ನೀತಿಯನ್ನು ಅನುಸರಿಸುತ್ತಿರುವ ಪತ್ರಿಕೆಗಳ ಮೇಲೆ ಅತಿಯಾದ ನಿರ್ಬಂದ ಹೇರದೆ ಕೆಲಕಾಲ ಅವುಗಳ ಪ್ರಕಟಣೆಗಳನ್ನು ನಿಷೇಧ, ಸಂಪಾದಕರ ಬಂದನ ಇಂತಹ ಕ್ರಮಗಳನ್ನು ಕೈಕೊಂಡಿದ್ದು ಕಂಡುಬರುತ್ತದೆ. ಅದಾಗ್ಯೂ ಮೈಸೂರು ಭಾಗದಲ್ಲಿ ಇಂಗ್ಲೀಷ ಓದುಗರಿಗಿಂತ ಕನ್ನಡ ಓದುಗರ ಸಂಖ್ಯೆ ಹೆಚ್ಚಾಗಿತ್ತೆಂಬುದನ್ನು ಈ ಕೆಳಗಿನ ಅಂಕಿ ಅಂಶಗಳಿಂದ ಕಂಡುಬರುತ್ತದೆ. 1911 ರಲ್ಲಿ 6.44, 1921 ರಲ್ಲಿ 7.5, 1931 ರಲ್ಲಿ 9.08, ಪ್ರತಿಶತ ಇರುವುದು ಕಂಡು ಬರುತ್ತದೆ. ಇದೇ ಸಂಧರ್ಭದಲ್ಲಿ ಕ್ರಮವಾಗಿ ಇಂಗ್ಲೀಷ ಓದುಗರ ಸಂಖ್ಯೆ 0.68, 0.98 ಮತ್ತು 1.5 ಪ್ರತಿಶತ ಆಗಿರುವುದು ತಿಳಿದುಬರುತ್ತದೆ. (ರಾಮಕೃಷ್ಣನ್ 1997, 164, 9) ಮೈಸೂರು 1910 ರಲ್ಲಿ ವೃತ್ತಾಂತ ಪತ್ರಿಕೆ 4950, ಮೈಸೂರು ಸ್ಟಾರ 1910 ರಲ್ಲಿ 2000, ಸಾಧ್ವಿ ಪತ್ರಿಕೆ 1910 ರಲ್ಲಿ 1300, ಒಕ್ಕಲಿಗ ಪತ್ರಿಕೆ 1910 ರಲ್ಲಿ 1500. ಪ್ರಸಾರ ಸಂಖ್ಯೆಗಳನ್ನು ಹೊಂದಿತ್ತೆಂಬುದನ್ನು ತಿಳಿದುಬರುತ್ತದೆ.[13]

**ಉಪಸಂಹಾರ :**

ಹೀಗೆ ಸ್ವಾತಂತ್ರ್ಯ ಪೂರ್ವದಲ್ಲಿಯೂ ಮೈಸೂರು, ಹೈದ್ರಾಬಾದ್, ಮದ್ರಾಸ್, ಮುಂಬಯಿ ಭಾಗಗಳಲ್ಲಿ ನಿರಂತರವಾಗಿ ಪತ್ರಿಕೆಗಳು ಹೆಚ್ಚಿದಂತೆ ಓದುಗರ ಸಂಖ್ಯೆ ಹೆಚ್ಚುತ್ತಾ ಹೊಯಿತು ಎಂಬುದು ಮೇಲೆ ವಿವರಿಸಿದ ಮೈಸೂರು ಭಾಗದ ಪತ್ರಿಕೆಗಳ ಬೆಳವಣಿಗೆಯ ಅಂಕಿಸಂಖ್ಯೆಯಿಂದ ವ್ಯಕ್ತವಾಗುತ್ತದೆ. ಕೇವಲ ಪತ್ರಿಗಳ ಬೆಳವಣಿಗೆ ಅಷ್ಟೆ ಅಲ್ಲದೆ ಸ್ವಾತಂತ್ರ್ಯ ಹೋರಾಟಗಾರರ ಸಂಖ್ಯೆ ದ್ವಿಗುಣಗೊಂಡು ಕರ್ನಾಟಕವು ಸ್ವಾತಂತ್ರ್ಯ ಹೋರಾಟಕ್ಕೆ ವಿಶಿಷ್ಟ ಕೊಡುಗೆ ನೀಡಲು ಕಾರಣವಾಯಿತು. ಹೀಗೆ ಬೆಳೆದು ಬಂದ ಪತ್ರಿಕೆಗಳ ಬಗೆಗಿನ ಅಧ್ಯಯನಗಳು ಸಾಕಷ್ಟು ಬೆಳಕು ಚೆಲ್ಲಿವೆ, ಈ ಕ್ಷೇತ್ರದಲ್ಲಿ ಸಂಶೋಧನೆ ಕೈಕೊಳ್ಳಲು ಬಯಸುವವರಿಗೆ ಇನ್ನು ವಿಫುಲವಾದ ಅವಕಾಶಗಳಿವೆ. ಪ್ರತಿಯೊಂದು ಪತ್ರಿಕೆಯು ಸ್ವಾತಂತ್ರ್ಯ ಹೋರಾಟಕ್ಕೆ ನೀಡಿದ ಕಾಣಿಕೆಯನ್ನು ಸಮಗ್ರವಾಗಿ ಅಧ್ಯಯನ ಮಾಡಬೇಕಾದ ಅಗತ್ಯವಿದೆ, ಎಂಬುದು ತಿಳಿದುಬರುತ್ತದೆ.

**Referance :**


1. Krishnamurthy Nadigaetal (1961), ' Bharatiya Patrikodyama', Prasaranga, Mysore University, Mysore.
2. Dr.Sreenivasa Havanoora (1974), ‘Hosagannadadha Arunodaya’, Institute of Kannada study, Mysore University,Mysore.
3. Dr.Sreenivasa Havanoor a (1974), ‘Hosagannadadha Arunodaya’, Institute of Kannada study, Mysore University,Mysore.
4. Kannada Patrikodyamakke, Herman Mogling Koduge, https://kanaja.gov.in
5. Natarajan, J(1962), ‘A History of press in India’, the Bombay, Asia Publication House.
6. Gundappa, D.V, (1988) ,'Vritha patrike', Karnataka Patrika Academy, Bangalore,.
7. Sasthy, N.S. Sitarama (1989), ‘Kannada Patrikodyama', Karnataka Press Academy, Bangalore.
8. Smt. Madhumathi Uppar Dr. G.B. Kulkarni The Role of Rajahamsa Newspaper as on Inspirational Force in Freedom Movement in Dharwad www.ijcrt.org © 2020 IJCRT | Volume 8, Issue 3 March 2020 | ISSN: 2320-2882
9. Dr.Sreenivasa Havanoora (1974), ‘Hosagannadadha Arunodaya’, Institute of Kannada study, Mysore University,Mysore.
10. Gundappa . D.V. (1940), 'The press in Mysore' The Karnataka Publishing House, Bangalore.
11. Sahana Udupa Print communalism: The press and the non-Brahmin movement in early Mysore, 1900–30 http://cis.sagepub.com/
12. Chandunavara.J.M, (2008.), ‘Patrakartaragi Mohare Hnamantarayara ondu Adyayana’, Madhura Prakashana, Dharwada.
13. Ramakrishnan, R. 1997. Press and Politics in an Indian State: Mysore (1859–1947). Channarayapatna: Swabhimana Prakashana. Contributions to Indian Sociology 44, 3 (2010): 265–297